# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಪಶ್ಚಿಮ ವಲಯ, ಶ್ರೀರಾಮಮಂದಿರ ಉಪವಿಭಾಗ

### ವಾರ್ಡ್ ನಂ.98 : ಪ್ರಕಾಶ್ ನಗರ

**ದಿನಾಂಕ: 19.05.2021 ರಂದು ಮಧ್ಯಾಹ್ನ 3.00 ಗಂಟೆಗೆ ಶ್ರೀ ಎಂ.ಬಿ.ನಾಗರಾಜು, ನೋಡಲ್ ಅಧಿಕಾರಿ, ವಾರ್ಡ್ 98 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಅಭಿಯಂತರರು, ವಾರ್ಡ್ 98ರ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

ಸಭೆಯಲ್ಲಿ ಹಾಜರಿದ್ದವರು:

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಎಂ.ಬಿ.ನಾಗರಾಜು | ನೋಡಲ್ ಅಧಿಕಾರಿ-ವಾರ್ಡ್ 98 |
| 2 | ಶ್ರೀ ಮಂಜುನಾಥ್ ಡಿ ಎಸ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು-ವಾರ್ಡ್ 98 |
| 3 | ಡಾ.ಶೀಲಾ | ಆರೋಗ್ಯ ಅಧಿಕಾರಿ, PHC ಪ್ರಕಾಶ್ ನಗರ |
| 4 | ಕವಿತ ಬಿ.ಎಲ್ | ಶುಶ್ರೂಷಕಿ, PHC ಪ್ರಕಾಶ್ ನಗರ |
| 5 | ರಮೇಶ್ ಎಂ | ಕಂದಾಯ ವಸೂಲಿಗಾರರು |
| 6 | ಆರ್ ನರಸಿಂಹ | ಬಿ.ಡಬ್ಲ್ಯೂ.ಎಸ್.ಎಸ್,ಬಿ |
| 7 | ಎಂ.ಡಿ.ಶ್ರೀಧರ್ | ಎಫ್.ಡಿ.ಎ |
| 8 | ಲಕ್ಷ್ಮೀ ನಾರಾಯಣ್ ಆರ್ | ಹೊಸಬೆಳಕು ಜನಸ್ಪಂದನ ವೇದಿಕೆ |
| 9 | ಪದ್ಮನಾಭ ಎಸ್.ವಿ | ಎನ್.ಜಿ.ಓ |
| 10 | ಜೆ.ಶ್ರೀನಿವಾಸ್ | ಎನ್.ಜಿ.ಓ |
| 11 | ಬಿ.ಎಸ್.ಪ್ರವೀಣ್ ಕುಮಾರ್ | ಸ್ಥಳೀಯ ನಾಗರೀಕರ ಕಲ್ಯಾಣ ಸಂಘ |

:ನಡಾವಳಿಯ ವರದಿ:

ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಮಂಜುನಾಥ್ ಡಿ.ಎಸ್ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಮತ್ತು ವಾರ್ಡ್ ಕಮಿಟಿ ಸದಸ್ಯರಿಗೆ ಸ್ವಾಗತ ಕೋರಿದರು.

:ನಡಾವಳಿಯ ವರದಿ:

- ಕಾರ್ಯದರ್ಶಿಗಳಾದ ಶ್ರೀ ಡಿ.ಎಸ್.ಮಂಜುನಾಥ್ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

- **ಕೋವಿಡ್-19, ಸಾಂಕ್ರಾಮಿಕ ರೋಗದ ಬಗ್ಗೆ**

  - ಶ್ರೀ ಎಂ.ಬಿ.ನಾಗರಾಜು, ನೋಡಲ್ ಅಧಿಕಾರಿ-ವಾರ್ಡ್ ನಂ.98, ರವರು ಮಾತನಾಡಿ ಮೊದಲಿಗೆ ಸಭೆಯಲ್ಲಿ ಹಾಜರಿದ್ದ ಡಾ.ಶೀಲಾ ರವರನ್ನು ಸಭೆಗೆ ಸ್ವಾಗತಿಸಿದರು.

ಮುಂದುವರೆದು ಮಾತನಾಡಿ, ಕೋವಿಡ್-19 ಸಾಂಕ್ರಾಮಿಕದ 2ನೇ ಅಲೆಯಲ್ಲಿ ಹೆಚ್ಚಿನ ಸಾವು-ನೋವು ಸಂಭವಿಸಿದ್ದು, ಅದನ್ನು ತಡೆಗಟ್ಟು ನಿಟ್ಟಿನಲ್ಲಿ ವಾರ್ಡ್ ಮಟ್ಟದಲ್ಲಿ ವಾರ್‌ರೂಂಗಳನ್ನು ಸ್ಥಾಪಿಸಿ ಸಾಧ್ಯವಾದಷ್ಟು ವಾರ್ಡ್ ಮಟ್ಟದಲ್ಲಿಯೇ ಸೋಂಕನ್ನು ತಡೆಗಟ್ಟಲು ಅಗತ್ಯ ಕ್ರಮ & ಕಾರ್ಯತಂತ್ರಗಳನ್ನು ರೂಪಿಸುವುದು ಅತ್ಯಾವಶ್ಯಕವಾಗಿರುವುದನ್ನು ತಿಳಿಸುತ್ತಾ, ಈ ಸಂಬಂಧ ಕರ್ನಾಟಕ ಸರ್ಕಾರದ ಆದೇಶದಂತೆ ವಾರ್ಡ್ ಮಟ್ಟದಲ್ಲಿ WDC {**WARD DETER** (Decentralized Traige & Emergency Response) **COMMITTEE**)ಯನ್ನು ರಚಿಸಿ ಕೋವಿಡ್-19 ನಿಯಂತ್ರಣ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಆದೇಶಿಸಿರುವ ಮಾಹಿತಿಯನ್ನು ಸಭೆಯಲ್ಲಿ ವಿವರವಾಗಿ ತಿಳಿಸಿದರು.

- ವಾರ್ಡ್ ವಾರ್ ರೂಂ ಸ್ಥಾಪಿಸುವ ಸಂಬಂಧ ಚರ್ಚಿಸಲಾಯಿತು. ಡಾ.ಶೀಲಾರವರು ಮಾತನಾಡಿ ರಾಜಾಜಿನಗರ ಇ.ಎಸ್.ಐ ಆಸ್ಪತ್ರೆಯಲ್ಲಿ ಎಲ್ಲಾ ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಟೆಸ್ಟಿಂಗ್ ಅನ್ನು PHC ಪ್ರಕಾಶ್ ನಗರದಲ್ಲಿ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು.
- ಡಾ.ಶೀಲಾ, ರವರು ಮಾತನಾಡಿ, ಮನೆಗಳಲ್ಲಿ ಐಸೋಲೇಷನ್ ಮಾಡಲು ಸ್ಥಳಾವಕಾಶ ಇಲ್ಲದವರನ್ನು ಇ.ಎಸ್.ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಇವರಿಗೆ ಊಟ, ಔಷಧಿಯನ್ನು ಒದಗಿಸಿ ಹಾಗೂ ಸೋಂಕಿತರ ನಿಗಾ ವಹಿಸಲು ವೈದ್ಯರು ಹಾಗೂ ಶುಶ್ರೂಷಕರ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಮುಂದುವರೆದು ಶ್ರೀ ಎಂ.ಬಿ.ನಾಗರಾಜು, ನೋಡಲ್ ಅಧಿಕಾರಿ-ವಾರ್ಡ್ ನಂ.98, ರವರು ಮಾತನಾಡಿ ಸಂಪನ್ಮೂಲ ಹಾಗೂ ಸ್ವಯಂ ಸೇವಕರನ್ನು ಒಟ್ಟುಗೂಡಿಸಿ ಹೋಮ್ ಐಸೋಲೇಷನ್ ಆದವರಿಗೆ ಸಮರ್ಪಕವಾಗಿ ಔಷಧಿ, ಮಾಸ್ಕ್, ಪಲ್ಸ್ ಆಕ್ಸಿಮೀಟರ್ ಸಹಾಯದಿಂದ ಆಕ್ಸಿಜನ್ ಮಟ್ಟವನ್ನು ಪರೀಕ್ಷಿಸಿ ಸೋಂಕಿತರಿಗೆ ಧೈರ್ಯ ತುಂಬುವ ಕೆಲಸವನ್ನು ಮಾಡಬೇಕೆಂದು ಕೋರಿದರು.
- ಡಾ.ಶೀಲಾ, ರವರು ಮಾತನಾಡಿ, ಪ್ರಕಾಶ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ಲಂಬಿಂಗ್ ದುರಸ್ಥಿ ಕಾಮಗಾರಿಗಳನ್ನು ಮಾಡಿಕೊಡಲು ಕೋರಿದರು.
    - ಈ ಬಗ್ಗೆ ಡಿ.ಎಸ್.ಮಂಜುನಾಥ್, ಸಹಾಯಕ ಅಭಿಯಂತರರು ಮಾತನಾಡಿ, ಕೋವಿಡ್-19 ಲಾಕ್‌ಡೌನ್ ಕಾರಣದಿಂದ ಕೂಲಿಯಾಳುಗಳಿಲ್ಲದೇ ಕಾಮಗಾರಿಗಳು ನಿಂತಿದ್ದು, ಲಾಕ್‌ಡೌನ್ ಮುಗಿದ ನಂತರ ದುರಸ್ಥಿಪಡಿಸಿಕೊಡಲಾಗುವುದೆಂದು ತಿಳಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ಕೋವಿಡ್-19 ಸಾಂಕ್ರಾಮಿಕವನ್ನು ವಾರ್ಡ್ ಮಟ್ಟದಲ್ಲಿಯೇ ಪರಿಹರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಮಂಜುನಾಥ್ ಡಿ ಎಸ್ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| **ಸದಸ್ಯ ಕಾರ್ಯದರ್ಶಿ-ವಾರ್ಡ್ 98 ಹಾಗೂ ಸಹಾಯಕ ಅಭಿಯಂತರರು,** | (ಶ್ರೀ ಎಂ.ಬಿ.ನಾಗರಾಜು)<br>**ನೋಡಲ್ ಅಧಿಕಾರಿ ವಾರ್ಡ್-98** |

**ಪ್ರತಿಯನ್ನು:**

1) ಮಾನ್ಯ ವಲಯ ಆಯುಕ್ತರು, ಪಶ್ಚಿಮ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
2) ಜಂಟಿ ಆಯುಕ್ತರು, ಪಶ್ಚಿಮ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಕಾರ್ಯಪಾಲಕ ಅಭಿಯಂತರರು (ರಾಜಾಜಿನಗರ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು (ಶ್ರೀರಾಮಮಂದಿರ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.98 ರವರ ಮಾಹಿತಿಗಾಗಿ
6) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ
7) ಸಹಾಯಕ ಅಭಿಯಂತರರು (ವಿದ್ಯುತ್ (ಬೀದಿದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
8) ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ರಾಜಾಜಿನಗರ ಪೋಲೀಸ್ ಠಾಣೆ ರವರ ಮಾಹಿತಿಗಾಗಿ
9) ಕಛೇರಿ ಕಡತಕ್ಕೆ